ನೂಲಿನ ಗಿರಣಿಗಳ ಸಾಲವನ್ನು ಷೇರನ್ನಾಗಿ ಪರಿವರ್ತಿಸುವುದು

693(338); ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು)

ಅ) ರಾಜ್ಯದಲ್ಲಿರುವ ಹತ್ತಿ ನೂಲಿನ ಗಿರಣಿಗಳ ಸಾಲವನ್ನು ಷೇರನ್ನಾಗಿ ಪರಿವರ್ತಿನೆ ಮಾಡುವ ಮನವಿಗಳು ಸರ್ಕಾರಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಬುರಾವ್ ಚಿಂಚನಸೂರ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಹೌದು.

ಆ) ಸಹಕಾರಿ ಕ್ಷೇತ್ರದ ಒಟ್ಟು 9 ಸಹಕಾರಿ ಹತ್ತಿ/ಜವಳಿ ನೂಲಿನ ಗಿರಣಿಗಳನ್ನು ಪುನಃಶ್ಚೇತನಗೊಳಿಸಲು ದಿನಾಂಕ:31.03.2013ರ ಅಂತ್ಯಕ್ಕೆ ಇದ್ದಂತೆ ಒಟ್ಟು ರೂ. 19,026.20 ಲಕ್ಷ ಸಾಲ ಮತ್ತು ಬಡ್ಡಿಯ ಮೊತ್ತವನ್ನು ಷೇರುಗಳನ್ನಾಗಿ ಪರಿವರ್ತಿಸುವ ಸಂಬಂಧ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಕುಡಿಯುವ ನೀರು

694(22); ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ)

ಅ) ಚಿಂತಾಮಣಿ ನಗರಕ್ಕೆ ಕುಡಿಯುವ ನೀರಿನ ಸಲುವಾಗಿ ಅಂಬಾಜಿದುರ್ಗ ಹೋಬಳಿಯ ಭಕ್ತರ ಹಳ್ಳಿಯ ಅರಸಿಕೆರೆಯಿಂದ ನೀರು ಸರಬರಾಜು ಮಾಡಲು ಡಿ.ಪಿ.ಆರ್. ತಯಾರುಮಾಡಿ ಕೆ.ಯು.ಡಬ್ಲ್ಯೂಎಸ್.ಗೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ತನಕ ಕೈಗೊಂಡ ಕ್ರಮಗಳೇನು

ಇ) ಯಾವ ಕಾಲಮಿತಿಯೊಳಗೆ ಸಚಿವ ಸಂಪುಟಕ್ಕೆ ತಂದು ಅನುಮೋದಿಸಲಾಗುವುದು; ವಿವರ ನೀಡುವುದು?